

## ಭಿನ್ನತೆ ಬಯಸುವವರಿಗಾಗಿ...

‘ವೆಸ್ಟರ್ನ್ ಹ್ಯಾಟ್’ನದ್ದು ಬೇರೆಯದೇ ಖದರ್. ‘ಕೌ ಬಾಯ್ ಹ್ಯಾಟ್’ ಎಂದು ಕರೆಯಲಾಗುವ ಈ ಟೋಪಿಯಲ್ಲಿ ಬೇಕಾದಷ್ಟು ವಿಧಗಳಿವೆ. ಪಿಂಚ್ ಫ್ರಂಟ್, ಬಾಸ್ ಆಫ್ ದಿ ಪ್ಲೇನ್ಸ್, ಬ್ರಿಕ್ ಕ್ರೀಸ್, ಗ್ಯಾಂಬ್ಲರ್ ಕ್ರೀಸ್, ಟಾಂ ಮಿಕ್ಸ್, ಓಪನ್ ಕ್ರೌನ್ ಕ್ರೀಸ್ ಹೀಗೆ ಸಾಕಷ್ಟು ವಿಧಗಳಿದ್ದು, ಲೆದರ್‌ನಲ್ಲಿ ವಿನ್ಯಾಸಗೊಳಿಸಲಾದ ಟೋಪಿ ಜನಪ್ರಿಯ. ಅಚ್ಚುಕಟ್ಟುತನ ಬಯಸದ, ಅವ್ಯವಸ್ಥಿತ ಉಡುಪನ್ನೇ ಸ್ಟೈಲ್ ಆಗಿಸಿಕೊಂಡ ಬೋಹೊ ಶೈಲಿಯ ಹ್ಯಾಟ್ ಭಿನ್ನತೆ ಬಯಸುವವರಿಗೆ ಹೇಳಿಮಾಡಿಸಿದ್ದಾಗಿದೆ.



ಈಜಿಪ್ಟ್‌ನಲ್ಲಿ ಸಮಾಧಿಯೊಂದರ ಮೇಲೆ ಕಾಣಸಿಕ್ಕ, ಒಣಹುಲ್ಲಿನಿಂದ ಮಾಡಿದ ಶಂಕುವಿನಾಕಾರದ ಟೋಪಿ ತೊಟ್ಟ ಮನುಷ್ಯನ ವರ್ಣಚಿತ್ರ ಟೋಪಿಯ ಮೊದಲ ಚಿತ್ರ ಎಂದು ದಾಖಲಾಗಿದೆ.

ಟೋಪಿ ವಿನ್ಯಾಸಗೊಂಡ ಮುಖ್ಯ ಉದ್ದೇಶ ಸುಡು ಸುಡು ಬಿಸಿಲಿನಿಂದ ನೆತ್ತಿಯನ್ನು ರಕ್ಷಿಸಿಕೊಳ್ಳಲು. ನೆತ್ತಿ ಮೂಲಕ ಇಡೀ ದೇಹಕ್ಕೆ ಆಗಬಲ್ಲ ಶಾಖ ತಡೆಯಲು. ಆನಂತರ ಟೋಪಿ ಸಾಮಾಜಿಕ ಸ್ಥಾನಮಾನದ ಸಂಕೇತ ಎನ್ನುವಂತೆ ಬದಲಾಯಿತು. ಸ್ಥಾನಮಾನಕ್ಕೆ ತಕ್ಕಂತೆ ಟೋಪಿಯಲ್ಲೂ ವೈವಿಧ್ಯ ಬಂತು.

ಸ್ಥಾನಮಾನದಿಂದಾಚೆ ಸರಿದು ಫ್ಯಾಷನ್ ಪ್ರಪಂಚಕ್ಕೆ ಕಾಲಿಟ್ಟ ಈ ಟೋಪಿಗಳು ಪುರುಷರಿಗಷ್ಟೇ ಅಲ್ಲ, ಮಹಿಳೆಯರ ಕಣ್ಣಿಗೂ ಆಕರ್ಷಕವಾಗಿ ಕಂಡವು. ಗುಂಪಿನಲ್ಲಿ ಎದ್ದು ಕಾಣುವಂತೆ ಮಾಡುವ ಈ ಟೋಪಿಗಳನ್ನು ತಮ್ಮ ದಿರಿಸಿಗೆ ತಕ್ಕಂತೆ ತೊಟ್ಟು ಫ್ಯಾಷನಬಲ್ ಆಗಿ ಮಿಂಚಿದರು.

ಇಂಗ್ಲೆಂಡ್ ರಾಣಿ ಕ್ವೀನ್ ಎಲಿಜಬೆತ್ 2, ಐವತ್ತು ವರ್ಷಗಳಲ್ಲಿ ಸುಮಾರು 5000 ಹ್ಯಾಟ್‌ಗಳನ್ನು ಧರಿಸಿದ್ದರಂತೆ.

ಹೀಗೆ ದಶಕ ದಶಕಗಳ ಕಾಲ ಫ್ಯಾಷನ್ ಲೋಕವನ್ನಾಳಿದ್ದ ಈ ಟೋಪಿಗಳು ಸದ್ದೇ ಇಲ್ಲದೆ ತೆರೆಮರೆಗೆ ಸರಿದಿದ್ದವು. ಈಗ ಮತ್ತೆ ಟೋಪಿಗಳಿಗೆ ಕಾಲ ಕೂಡಿಬಂದಿದೆ. ಥರಾವರಿ ಶೈಲಿಯ ಟೋಪಿಗಳು ಈಗಿನ ಯುವಕರ, ಪುರುಷರ ದಿರಿಸಿನಲ್ಲಿ ಒಂದಾಗುತ್ತಿವೆ. ಅದೇ ಅವರ ಸ್ಟೈಲ್ ಸ್ಟೇಟ್‌ಮೆಂಟ್ ಕೂಡ ಆಗುತ್ತಿವೆ. ಹವಾಮಾನಕ್ಕೆ ತಕ್ಕಂತೆ, ಉಡುಪಿಗೆ ಹೊಂದುವಂತೆ ನಿರ್ದಿಷ್ಟವಾದ, ಜೊತೆಗೆ ಸ್ಟೈಲಿಷ್ ಆಗಿಯೂ ಕಾಣಬಲ್ಲ ಟೊಪ್ಪಿಗೆಗಳ ತಯಾರಿಯಲ್ಲಿ ದೊಡ್ಡ ದೊಡ್ಡ ಬ್ರ್ಯಾಂಡ್‌ಗಳೂ ಪೈಪೋಟಿಗೆ ಬಿದ್ದಿವೆ.

ಅಂದ ಹಾಗೆ ಹ್ಯಾಟ್ ಹಾಗೂ ಕ್ಯಾಪ್ ಎರಡರ ನಡುವೆ ಸಣ್ಣ ವ್ಯತ್ಯಾಸವಿದೆ. ಹ್ಯಾಟ್‌ನಲ್ಲಿ ಬೋಗುಣಿಯಂತೆ ಅಗಲ ಅಂಚಿದ್ದರೆ, ಕ್ಯಾಪ್‌ನಲ್ಲಿ ಮುಂಭಾಗ ಮಾತ್ರ ಚಾಚಿರುತ್ತದೆ. ಹ್ಯಾಟ್‌ನ ಮೇಲ್ಭಾಗ ಉದ್ದವಿದ್ದರೆ, ಕ್ಯಾಪ್ ಸಪಾಟಾಗಿರುತ್ತದೆ. ಈ ಎರಡೂ ಅವಶ್ಯಕತೆಗಳಿಗೆ ತಕ್ಕಂತೆ ಬಳಕೆಯಾಗುತ್ತವೆ.

## ಟ್ರೆಂಡ್‌ನಲ್ಲಿ ಬಗೆ ಬಗೆ ಟೋಪಿಗಳು

ಹಲವು ರೀತಿಯ ಟೋಪಿಗಳು ಟ್ರೆಂಡ್‌ನಲ್ಲಿವೆ. ‘ಬೇಸ್‌ಬಾಲ್ ಹ್ಯಾಟ್/ ಕ್ಯಾಪ್’ ಅತಿ ಪ್ರಸಿದ್ಧ ಶೈಲಿಯ ಟೋಪಿ ಎನಿಸಿದೆ. ಯುವಕರು, ಮಧ್ಯವಯಸ್ಸಿನ ಪುರುಷರು ಇಷ್ಟಪಡುವ, ಸರಳವಾದ, ಅಷ್ಟೇ ಸ್ಟೈಲಿಷ್ ಕೂಡ ಆಗಿರುವ ಈ ಶೈಲಿಯಲ್ಲೂ ಹಲವು ಬಗೆಗಳಿವೆ. ಫಿಟ್ಟೆಡ್, ಸ್ನಾಪ್‌ಬ್ಯಾಕ್, ಸ್ಟ್ಯಾಪ್‌ಬ್ಯಾಕ್, ಫ್ಲೆಕ್ಸ್‌ಫಿಟ್, ಟ್ರಕರ್, 5 ಪ್ಯಾನೆಲ್ ಸ್ಟೈಲ್ ಎಂಬ ಆಯ್ಕೆಗಳಿದ್ದು, ಈ ಬಹು ಆಯ್ಕೆ ಹಾಗೂ ಎಲ್ಲ ಕಾಲಕ್ಕೂ ಒಪ್ಪುವ ಶೈಲಿಯೇ ಈ ಟೋಪಿಯ ಜನಪ್ರಿಯತೆಗೆ ಕಾರಣ.

ಬೇಸಿಗೆಯ ಸುಡು ಬಿಸಿಲಿನಲ್ಲಿ ಹೊರಗೆ ಸುತ್ತಾಡಲು ಹೇಳಿಮಾಡಿಸಿದಂಥ ‘ಸನ್ ಹ್ಯಾಟ್’ಗಳು ಕೂಡ ಯುವಕರ ನೆಚ್ಚಿನ ಆಯ್ಕೆ. ಹೆಚ್ಚೇ ಅಗಲವಾಗಿರುವ ಈ ಟೋಪಿ, ಬಿಸಿಲಿನಿಂದ ಮುಖವನ್ನು ಮರೆಮಾಚಲು ಸಹಕಾರಿ. ಇದು ಯುವತಿಯರಿಗೂ ಫೇವರೆಟ್.

ಹಳೇ ಜಮಾನದ ಯಾವುದೇ ಸ್ಟೈಲಿಶ್ ಹೀರೊ ಚಿತ್ರವನ್ನು ನೋಡಿದರೆ, ಎದ್ದು ಕಾಣುವುದು ಈ ‘ಫೆಡೋರಾ ಹ್ಯಾಟ್’. ಮೈಕಲ್ ಜಾಕ್ಸನ್ ಐಕಾನಿಕ್ ಸ್ಟೈಲ್ ಆಗಿದ್ದ ಈ ಫೆಡೋರಾ ಟೋಪಿ ಈ ಪೀಳಿಗೆಯ ಚಿತ್ತವನ್ನೂ ಕದ್ದಿದೆ.

ಚಳಿ ತಡೆಯುವುದಷ್ಟೇ ಅಲ್ಲ, ಸ್ವೆಟರ್‌ಗಳ ಜೊತೆಗೂ ಮ್ಯಾಚ್ ಆಗುವಂಥ ಟೊಪ್ಪಿ ಬೇಕು ಎಂಬ ಹುಡುಗರ ಹುಡುಕಾಟವನ್ನೇ ಮೂಲವಾಗಿಸಿಕೊಂಡು ಬಂದ ‘ಬೀನಿ ಟೋಪಿ’ಗಳು ಕಿವಿಗಳನ್ನು ಬೆಚ್ಚಗಿರಿಸುವುದು ಮಾತ್ರವಲ್ಲ, ಚೆಂದಕ್ಕೂ ತಕ್ಕಂತಿವೆ. ಉಣ್ಣೆಯಿಂದ ತಯಾರಾಗುವ ಈ ಟೋಪಿಗಳು ಟೀ–ಶರ್ಟ್, ಸ್ವೆಟರ್, ಸ್ವೆಟ್ ಶರ್ಟ್‌ಗಳಿಗೆ ಒಪ್ಪುವುದರಿಂದ ಹೆಚ್ಚಿನವರು ಇದನ್ನು ಆರಿಸಿಕೊಳ್ಳುತ್ತಾರೆ.

ಪುರುಷರ ಫ್ಯಾಷನ್ ಲೋಕದಲ್ಲಿ ರಾಜನಂತೆ ಮೆರೆದು, ತೆರೆಮರೆಗೆ ಸರಿದಿದ್ದ ‘ಬಕೆಟ್ ಹ್ಯಾಟ್’ಗಳು ಮತ್ತೆ ಟ್ರೆಂಡ್‌ನಲ್ಲಿವೆ. ಅಗಲ–ದುಂಡನೆಯ ಅಂಚಿನ ಈ ಟೋಪಿಯನ್ನು ತಲೆಕೆಳಗಾಗಿಸಿದರೆ ಬಕೆಟ್‌ನಂತೆಯೇ ಕಾಣುವುದರಿಂದ ಈ ಹೆಸರು ಬಂದಿದೆ.

ಫಾರ್ಮಲ್ ಇರಲಿ, ಟೀ ಶರ್ಟ್ ಇರಲಿ, ಸೂಟ್ ಇದ್ದರೂ ಸರಿ, ಅದಕ್ಕೆ ಒಪ್ಪುವಂಥ ಮತ್ತೊಂದು ಬಗೆಯ ಟೋಪಿ ‘ನ್ಯೂಸ್‌ಬಾಯ್ ಕ್ಯಾಪ್’. ಆಕಾರ ಚಪ್ಪಟೆ ಇದ್ದು, ಮುಂಭಾಗ ಸ್ವಲ್ಪವೇ ಚಾಚಿಕೊಂಡಂತಿರುವ ಇದು, ಆಧುನಿಕ ಯುವಕರ ಶೈಲಿಗೆ ಹೊಸ ಭಾಷ್ಯ ಬರೆದ ಟೋಪಿ.

ಬಟ್ಟೆಗಳನ್ನು ಹೊರತುಪಡಿಸಿ ಒಣಹುಲ್ಲಿನಿಂದ ತಯಾರಿಸುವ ‘ಪನಾಮಾ ಹ್ಯಾಟ್’ ದುಬಾರಿ ಎನಿಸಿದರೂ, ಭಿನ್ನತೆ ಬಯಸುವವರು ಇದನ್ನು ಕೊಳ್ಳದೇ ಇರರು. 19ನೇ ಶತಮಾನದಲ್ಲಿ ಹೆಚ್ಚು ಪ್ರಚಲಿತವಿದ್ದ ಈ ಸ್ಟ್ರಾ ಹ್ಯಾಟ್‌ಗಳು ತಲೆಯನ್ನು ಕೂಲ್ ಆಗಿಡುತ್ತವೆ ಎಂಬ ಕಾರಣಕ್ಕೆ ಪ್ರಸಿದ್ಧಿಯಾದವು. ಈಗಲೂ ಅಲ್ಲಲ್ಲಿ ಈ ಟೊಪ್ಪಿ ಧರಿಸುವ ಹುಡುಗರು ಕಾಣಸಿಗುತ್ತಾರೆ.

ಮಿಲಿಟರಿಯವರು ತೊಡುತ್ತಿದ್ದ ಭಿನ್ನ ಬಗೆಯ ಕ್ಯಾಪ್ ಈ ‘ಬೆರೆಟ್ ಹ್ಯಾಟ್’ಗಳು. ಸಪಾಟಾದ, ವೃತ್ತಾಕಾರದ ಈ ಟೋಪಿ ಅಂಚು ಅತಿ ಚಿಕ್ಕದಾಗಿರುವ ಕಾರಣಕ್ಕೆ ಇಷ್ಟಪಡುವವರು ಹೆಚ್ಚು. ಹುಡುಗರ ಫೇವರೆಟ್‌ನಲ್ಲಿ ಸಿಗುವ ಮತ್ತೊಂದು ಆಯ್ಕೆ ‘ವೈಸರ್ ಹ್ಯಾಟ್’. ನೆತ್ತಿ ಮೇಲೆ ಖಾಲಿ ಇದ್ದು, ಬಕಲ್ ಹಾಗೂ ಚಿಕ್ಕ ಅಂಚಿರುವ ಈ ಕ್ಯಾಪ್ ಅನ್ನು ಮುಖವನ್ನು ಮಾತ್ರ ಬಿಸಿಲಿನಿಂದ ಮರೆಮಾಡಲು ತೊಡುತ್ತಾರೆ. ಕ್ರೀಡೆಗಳಲ್ಲಿರುವವರು ಈ ಹ್ಯಾಟ್ ತೊಡುವುದು ಹೆಚ್ಚು.

ಈಚೆಗೆ ಪಾಪ್ ಸಿಂಗರ್ ಜಸ್ಟಿನ್ ಬೀಬರ್, ಹೂಡಿ ಮೇಲೆ ಟೋಪಿ ಧರಿಸಿದ್ದು ಹ್ಯಾಟ್ ಫ್ಯಾಷನ್‌ನಲ್ಲಿ ಹೊಸ ಸ್ಟೈಲ್ ಎನಿಸಿಕೊಂಡಿದೆ.